ಸಾಕ್ಷಿ ಯನ್ನು ದಿಃ 13.10.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. 20 ಸಾವಿರ ಮೇಲ್ಪಟ್ಟು ಹಣವನ್ನು ನಗದಾಗಿ ನೀಡಬಾರದು ಎಂದು ಕಾನೂನು ಇದೆ ಎಂದರೆ, ನನಗೆ ಗೊತ್ತಿಲ್ಲ.
2. ನಿಪಿ - 1ರಲ್ಲಿ ನಮೂದಿಸಿದ ದಿನಾಂಕಕ್ಕೆ ನೀವು ಬ್ಯಾಂಕಿನಲ್ಲಿ ನಗದೀಕರಣಕ್ಕೆ ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ, ಆರೋಪಿ ಹಣ ವಾಪಸ್ ನೀಡಬಹುದು ಎಂದು ಕಾದು ಲೇಟಾಗಿ ಹಾಕಿರುತ್ತೇನೆ.
3. ನಿಪಿ - 1ರ ಚೆಕ್ ಅಮಾನ್ಯವಾದ ನಂತರ ಆರೋಪಿಯನ್ನು ಭೇಟಿ ಮಾಡಿಲ್ಲ, ವಕೀಲರ ಮೂಲಕ ನೊಟೀಸು ನೀಡಿರುತ್ತೇನೆ ಎಂದು ನುಡಿಯುತ್ತಾರೆ.
4. ಆರೋಪಿಗೆ ನಾನು ಬಡ್ಡಿಗೆ ಹಣ ನೀಡಿರುವುದಿಲ್ಲ.
5. ನಾನು ಬಡ್ಡಿಗೆ ಬೇರೆ ಯಾರಿಗೂ ಸಹ ಹಣ ನೀಡಿಲ್ಲ.
6. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ.
7. ನನ್ನ ಆದಾಯಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಆ ರೀತಿ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ, ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ.
8. ಆರೋಪಿ ನಿಪಿ - 1ರ ಚೆಕ್ಕಿಗೆ ಕನ್ನಡದಲ್ಲಿ ಸಹಿ ಮಾಡಿರುತ್ತಾರೆ. ಚೆಕ್ಕಿಗೆ ಒಂದೇ ಕಡೆ ಸಹಿ ಮಾಡಿರುತ್ತಾರೆ.
9. ಆರೋಪಿ ನಿಪಿ - 1ರ ಚೆಕ್ಕಿಗೆ ಯಾವುದೇ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.
10. ಆರೋಪಿ ನಿಮ್ಮ ಗ್ರಾಮದವರು ಎಂದರೆ ಸರಿ.
11. ಈ ಪ್ರಕರಣದ ದಾಖಲು ಮಾಡುವ ಮೊದಲು ನೀವು ಆಗಾಗ ಆರೋಪಿ ಮನೆಗೆ ಹೋಗುತ್ತಿದ್ದೀರಿ ಎಂದರೆ, ಅವರು ವಾಟರ್ ಮ್ಯಾನ್ ಆದ್ದರಿಂದ ಸರಿಯಾಗಿ ನೀರು ಬಿಡದೇ ಇದ್ದಾಗ ಕೇಳಲು ಹೋಗುತ್ತಿದ್ದೆ. ಆ ರೀತಿ ಅವರ ಮನೆಗೆ ಹೋದ ಸಮಯದಲ್ಲಿ ಅವರ ಮನೆಯಲ್ಲಿರುವ ಚೆಕ್ಕನ್ನು ಪಡೆದುಕೊಂಡು ಬಂದಿದ್ದೀರಾ ಎಂದರೆ, ಸರಿಯಲ್ಲ, ಅವರೇ ನೀಡಿರುತ್ತಾರೆ.
12. ನಿಮ್ಮೊಂದಿಗೆ ಆರೋಪಿ ಯಾವುದೇ ಹಣಕಾಸಿನ ವ್ಯಾಪಾರ ಮಾಡಿಲ್ಲ ಎಂದರೆ ಸರಿಯಲ್ಲ.

13. ನಿಪಿ - 1(ಎ) ಸಹಿ ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ.
14. ನಿಪಿ - 1 ರಲ್ಲಿ ಬರೆದ ಬರವಣಿಗೆ ಹಾಗೂ ಸಹಿಯನ್ನು ನೀವೇ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.
15. ನಿಮಗೆ ಆರೋಪಿಗೆ 2 ಲಕ್ಷ ಹಣ ನೀಡುವಷ್ಟು ಆರ್ಥಿಕ ಶಕ್ತಿ ಇಲ್ಲ ಎಂದರೆ ಸರಿಯಲ್ಲ.
16. ನಿಮ್ಮಿಂದ ಹಣ ಪಡೆಯುವ ದರ್ದು ಆರೋಪಿಗೆ ಇರಲಿಲ್ಲ ಎಂದರೆ ಸರಿಯಲ್ಲ.
17. ಆರೋಪಿಗೆ ನೀವು ಯಾವುದೇ ಹಣ ನೀಡದೇ ಇದ್ದರೂ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ